# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **826** |
| **ವಿಧಾನ ಸಭೆ ಸದಸ್ಯರ ಹೆಸರು** | : | **ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **13.07.2023** |
| **ಉತ್ತರಿಸುವ ಸಚಿವರು** | : | **ಗೃಹ ಸಚಿವರು** |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | ಅಗ್ನಿಶಾಮಕ ಇಲಾಖೆಯಲ್ಲಿ ಸರ್ಕಾರದ ಸಿವಿಲ್ ಸೇವೆಗಳ ಮುಂಬಡ್ತಿಯಲ್ಲಿ ಮೀಸಲಾತಿ ಅನ್ವಯವಾಗುವ ಹುದ್ದೆಗಳಿಗೆ ಸರ್ಕಾರದ ಆದೇಶಗಳ(ಡಿಪಿಎಆರ್) ಪ್ರಕಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ನೌಕರರು ಲಭ್ಯರಾಗದಿದ್ದಲ್ಲಿ ಮುಂಬಡ್ತಿ ಹೊಂದಲು ನಿಗಧಿಪಡಿಸಿರುವ ಸಿಆಸುಇ ಇಲಾಖೆಯ ಆದೇಶದ ಪ್ರಕಾರ ಅರ್ಹತಾ ಸೇವೆಯನ್ನು 05 ವರ್ಷದಿಂದ 03 ವರ್ಷಕ್ಕೆ ಸಡಿಲಿಕೆಯನ್ನು ಜಾರಿ ಮಾಡಲಾಗಿದೆಯೇ; ಮಾಡದಿದ್ದಲ್ಲಿ ಸೂಕ್ತ ಕಾರಣಗಳನ್ನು ನೀಡುವುದು; | ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಅರ್ಹತಾ ಸೇವೆಯನ್ನು 05 ವರ್ಷದಿಂದ 03 ವರ್ಷಕ್ಕೆ ಸಡಿಲಿಕೆ ಮಾಡಲಾಗಿರುವುದಿಲ್ಲ.<br><br>ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ತಾಂತ್ರಿಕ ವಿಷಯದಲ್ಲಿ ಆಯಾ ಹುದ್ದೆಗೆ ಸಂಬಂಧಪಟ್ಟಂತೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿರುವ ಅರ್ಹತಾ ಸೇವೆಯನ್ನು ಪೂರೈಸುವುದು ಮತ್ತು ಕಾರ್ಯ ನಿರ್ವಹಣೆಯಲ್ಲಿ ಪರಿಣಿತಿ ಹೊಂದುವುದು ಹಾಗೂ ಆಯಾ ಹುದ್ದೆಗಳ ತಾಂತ್ರಿಕ ವಿಷಯಗಳಲ್ಲಿ ನೈಪುಣ್ಯತೆ ಹೊಂದುವುದು ಕೇವಲ 03 ವರ್ಷಗಳ ಅವಧಿಯಲ್ಲಿ ಕಷ್ಟಸಾಧ್ಯವಿರುತ್ತದೆ.<br><br>ಆದ್ದರಿಂದ, ಅರ್ಹತಾ ಸೇವೆಯನ್ನು 05 ವರ್ಷದಿಂದ 03 ವರ್ಷಕ್ಕೆ ಸಡಿಲಿಕೆ ಮಾಡುವುದು ಸೂಕ್ತವಲ್ಲ ಎಂದು ಅಭಿಪ್ರಾಯಿಸಲಾಗಿದೆ. |
| **ಆ)** | ಈ ಸಂಬಂಧ, ಮುಂಬಡ್ತಿಗೆ ನಿಗಧಿಪಡಿಸಿರುವ ಅರ್ಹತಾ ಸೇವೆ ಸಡಿಲಿಕೆಯ ಆದೇಶಗಳನ್ನು ಅನುಷ್ಠಾನ ಮಾಡದೇ, ಸದರಿ ಪ್ರಸ್ತಾವನೆಯನ್ನು ಕೈಬಿಡುವಂತೆ ಒಳಾಡಳಿತ ಇಲಾಖೆಗೆ ಅಗ್ನಿಶಾಮಕ ಇಲಾಖೆ ಪತ್ರ ಬರೆಯಲಾಗಿದೆಯೇ; (ಬರೆದಿದ್ದಲ್ಲಿ ವಿವರ ನೀಡುವುದು) | **ಹೌದು.**<br><br>ಸದರಿ ಪ್ರಸ್ತಾವನೆಯನ್ನು ಕೈಬಿಡುವಂತೆ ಕೋರಿ ಅಗ್ನಿಶಾಮಕ ಇಲಾಖೆಯ ಪತ್ರ ಸಂ:ಸಿಬ್ಬಂದಿ(2)184/2013-14, ದಿನಾಂಕ:22.08.2022 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತದೆ. |
| **ಇ)** | ಅರ್ಹತಾ ಸೇವೆ ಸಡಿಲಿಕೆ ಕೈ ಬಿಡುವ ಅಗ್ನಿಶಾಮಕ ಇಲಾಖೆಯ ಪ್ರಸ್ತಾವನೆಯನ್ನು ಒಳಾಡಳಿತ ಇಲಾಖೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಭಿಪ್ರಾಯ ಕೋರಲಾಗಿದೆಯೇ; (ವಿವರಗಳನ್ನು ನೀಡುವುದು) | ಸಿ.ಆ.ಸು.ಇಲಾಖೆಯ ಅಭಿಪ್ರಾಯ ಪಡೆಯಲಾಗಿರುತ್ತದೆ. ಮುಂದುವರೆದು ಅಗ್ನಿಶಾಮಕ ಮತ್ತು ತುರ್ತು ಇಲಾಖೆಯು ತಾಂತ್ರಿಕ ಇಲಾಖೆಯಾಗಿರುತ್ತದೆ. ತಾಂತ್ರಿಕ ಇಲಾಖೆಯಲ್ಲಿನ ಅಭ್ಯರ್ಥಿಗಳು ಸಾಕಷ್ಟು ನೈಪುಣ್ಯತೆ/ಪರಿಣಿತಿ ಅನುಭವವನ್ನು ಹೊಂದಿಲ್ಲದೇ ಇದ್ದ ಪಕ್ಷದಲ್ಲಿ ಪ್ರವಾಹ, ಬರಗಾಲ, ಭೂಕಂಪ, ಬಿರುಗಾಳಿ, ಕಾಡ್ಗಿಚ್ಚು, ಚಂಡಮಾರುತ, ಭೂಕುಸಿತ, ಜ್ವಾಲಾಮುಖಿ ಮುಂತಾದ ಪ್ರಕೃತಿ ವಿಕೋಪಗಳು ಹಾಗೂ ಮಾನವ ಸೃಷ್ಟಿಸಿದ ವಿಪತ್ತುಗಳಾದ ಕೈಗಾರಿಕಾ ಮತ್ತು ರಾಸಾಯನಿಕ ವಿಪತ್ತುಗಳು ಕಟ್ಟಡ ಕುಸಿತ, ರಸ್ತೆ ಅಪಘಾತಗಳು, ರೈಲು ದುರಂತಗಳು, ಸಮುದ್ರ ವಿಪತ್ತುಗಳು, ತೈಲ ವಿಪತ್ತುಗಳು, ಭೌಗೋಳಿಕ ವಿಪತ್ತುಗಳು ಹಾಗೂ ಇಲಾಖೆಯ ಸಂಭವನೀಯ ಅಗ್ನಿ ಅನಾಹುತ ಮತ್ತು ಇನ್ನಿತರ ವಿಪತ್ತು ಸಂದರ್ಭಗಳಲ್ಲಿ ಸಾರ್ವಜನಿಕರ ಆಸ್ತಿಪಾಸ್ತಿ ಸಂರಕ್ಷಿಸಲು ಹಾಗೂ ಜೀವಹಾನಿ ತಡೆಗಟ್ಟುವಂತಹ ಮಹತ್ತರವಾದ ಸೇವೆಯನ್ನು ಸಲ್ಲಿಸುವ ಇಲಾಖೆಯಾಗಿರುತ್ತದೆ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ ಸಿಬ್ಬಂದಿಗಳು ಕಾರ್ಯನಿರ್ವಹಣೆ ಜ್ಞಾನಹೊಂದುವುದು, ತಾಂತ್ರಿಕವಾಗಿ ನೈಪುಣ್ಯತೆ ಹಾಗೂ ಭೌತಿಕ ಮತ್ತು ಮಾನಸಿಕ ಸಧೃಡರಾಗಿ ಪರಿಣಿತಿ ಹೊಂದಬೇಕಾಗಿರುತ್ತದೆ. ಆದ್ದರಿಂದ, ಅರ್ಹತಾ ಸೇವೆಯನ್ನು 05 ವರ್ಷದಿಂದ 03 ವರ್ಷಕ್ಕೆ ಸಡಿಲಿಕೆ ಮಾಡುವುದು ಸೂಕ್ತವಾಗಿರುವುದಿಲ್ಲವೆಂದು ಅಭಿಪ್ರಾಯಿಸಿದೆ. |
| **ಈ)** | ಒಳಾಡಳಿತ ಇಲಾಖೆಯ ಆದೇಶವನ್ನು ಅನುಷ್ಠಾನಕ್ಕೆ ತರದೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ನೌಕರರಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲವೆ; ಈ ನಿಟ್ಟಿನಲ್ಲಿ ಸಂಬಂಧಪಟ್ಟ ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು) | |

**ಸಂಖ್ಯೆ: ಒಇ 180 ಎಸ್ಎಫ್‌ಬಿ 2023.**

(ಸಹಿ)

**(ಡಾ. ಜಿ. ಪರಮೇಶ್ವರ)**
**ಗೃಹ ಸಚಿವರು**